## ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 648
2. ಮಾನ್ಯ ಸದಸ್ಯರ ಹೆಸರು : ಶ್ರೀ ಅ.ದೇವೇಗೌಡ (ಪದವೀಧರ ಕ್ಷೇತ್ರ)
3. ಉತ್ತರಿಸಬೇಕಾದ ದಿನಾಂಕ : 20.02.2024
4. ಉತ್ತರಿಸುವ ಸಚಿವರು : ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಸಚಿವರು

| ಕ್ರಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ರಾಜ್ಯದ ಕಬ್ಬು ಬೆಳೆಗಾರರಿಗೆ ಬೆಂಬಲ ಬೆಲೆ ದರ ಹೆಚ್ಚಿಸುವ ಬಗ್ಗೆ ಧರಣಿಯನ್ನು ನಡೆಸಿದ್ದು, ಈ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮವೇನು; | ಕೇಂದ್ರ ಸರ್ಕಾರವು 2023-24ನೇ ಸಾಲಿನ ಸಕ್ಕರೆ ಹಂಗಾಮಿಗೆ ದಿನಾಂಕ 06.07.2023 ರಂದು ನ್ಯಾಯ ಮತ್ತು ಲಾಭದಾಯಕ ಬೆಲೆಯನ್ನು (Fair and Remunerative Price) ನಿಗದಿಗೊಳಿಸಿದ್ದು, ಶೇ.10.25 ರಷ್ಟು ಸಕ್ಕರೆ ಇಳುವರಿಗೆ ಪ್ರತಿ ಮೆ.ಟನ್ ಕಬ್ಬಿಗೆ ರೂ.3150/- ರಂತೆ ದರ ನಿಗದಿಗೊಳಿಸಿರುತ್ತದೆ ಕೇಂದ್ರ ಸರ್ಕಾರದ ಗ್ರಾಹಕರ ವ್ಯವಹಾರಗಳು, ಆಹಾರ ಮತ್ತು ಸಾರ್ವಜನಿಕ ವಿತರಣಾ ಮಂತ್ರಾಲಯದ ಅಧೀನದ ಆಹಾರ ಮತ್ತು ಸಾರ್ವಜನಿಕ ವಿತರಣಾ ಇಲಾಖೆಯ ಪತ್ರ ಸಂಖ್ಯೆ:3(1)/2022-SP-I, ದಿನಾಂಕ: 06.07.2023ರಲ್ಲಿ, 2023-24ನೇ ಸಾಲಿನ ಸಕ್ಕರೆ ಹಂಗಾಮಿಗೆ ನ್ಯಾಯ ಮತ್ತು ಲಾಭದಾಯಕ ಬೆಲೆಯನ್ನು (Fair and Remunerative Price) ನಿಗದಿಗೊಳಿಸಲಾಗಿದ್ದು, ವಿವರಗಳು ಈ ಕೆಳಕಂಡಂತೆ ಇರುತ್ತವೆ.<br>1. ಶೇಕಡ 10.25 ರಷ್ಟು ಸಕ್ಕರೆ ಇಳುವರಿಗೆ ಪ್ರತಿ ಕ್ವಿಂಟಾಲ್ ಕಬ್ಬಿಗೆ ರೂ.315.00<br>2. ಶೇಕಡ 10.25ಕ್ಕೆ ಮೇಲ್ಪಟ್ಟ ಇಳುವರಿಗೆ ತದನಂತರದ ಶೇಕಡ 0.1 ರಷ್ಟು ಇಳುವರಿಗೆ ಪ್ರತಿ ಕ್ವಿಂಟಾಲ್ ಕಬ್ಬಿಗೆ ರೂ.3.07 ರಂತೆ ಹೆಚ್ಚುವರಿ ಬೆಲೆ..<br>3. ಶೇಕಡ 10.25ಕ್ಕಿಂತ ಕಡಿಮೆ ಹಾಗೂ ಶೇಕಡ 9.5ಕ್ಕಿಂತ ಮೇಲ್ಪಟ್ಟ ಇಳುವರಿಯನ್ನು ಹೊಂದಿರುವ ಸಕ್ಕರೆ ಕಾರ್ಖಾನೆಗಳಿಗೆ ಸಂಬಂಧಿಸಿದಂತೆ ಶೇಕಡ 0.1 ರಷ್ಟು ಇಳುವರಿಗೆ ಪ್ರತಿ ಕ್ವಿಂಟಾಲ್‌ಗೆ ರೂ.3.07ರಷ್ಟು ಪ್ರಮಾಣದಲ್ಲಿ ನ್ಯಾಯ ಮತ್ತು ಲಾಭದಾಯಕ ಬೆಲೆಯನ್ನು ಕಡಿಮೆ ಮಾಡುವುದು.<br>4. ಶೇಕಡ 9.5 ರಷ್ಟು ಅಥವಾ 9.50 ಕ್ಕಿಂತ ಕಡಿಮೆ ಇಳುವರಿ ಹೊಂದಿರುವ ಕಾರ್ಖಾನೆಗಳಿಗೆ ಪ್ರತಿ ಮೆ.ಟನ್‌ಗೆ ರೂ.291.975 ಗಳ ನ್ಯಾಯ ಮತ್ತು ಲಾಭದಾಯಕ ಬೆಲೆ ನಿಗದಿಪಡಿಸುವುದು.<br><br>2022-23ನೇ ಸಾಲಿನಲ್ಲಿ ರಾಜ್ಯದ ಸಕ್ಕರೆ ಕಾರ್ಖಾನೆಗಳು ಪಡೆದ ಸಕ್ಕರೆ ಇಳುವರಿಯನ್ನು ಆಧರಿಸಿ, ಮೇಲ್ಕಂಡ ಮಾರ್ಗಸೂಚಿಗಳನ್ವಯ ರಾಜ್ಯದ ಸಕ್ಕರೆ ಕಾರ್ಖಾನೆಗಳು 2023-24ನೇ ಹಂಗಾಮಿನಲ್ಲಿ ಮೊದಲ ಕಂತಿನ ರೂಪದಲ್ಲಿ ಪಾವತಿಸಬೇಕಾದ ನ್ಯಾಯ ಮತ್ತು ಲಾಭದಾಯಕ ಬೆಲೆಯನ್ನು ನಿಗದಿಪಡಿಸಿ, ದಿನಾಂಕ:07.11.2023ರಂದು ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶನಾಲಯದಿಂದ ಆದೇಶವನ್ನು ಹೊರಡಿಸಲಾಗಿದೆ. ಸದರಿ ಆದೇಶದಲ್ಲಿ ನಿಗದಿಪಡಿಸಿರುವಂತೆ ಸಂಬಂಧಿಸಿದ ರಾಜ್ಯದ ಸಕ್ಕರೆ ಕಾರ್ಖಾನೆಗಳು ಪ್ರತಿ ಮೆ.ಟನ್ ಒಂದಕ್ಕೆ ಕನಿಷ್ಠ ರೂ.2920/- ಮತ್ತು ಗರಿಷ್ಠ ರೂ.3773/-ಗಳ ನ್ಯಾಯ ಮತ್ತು ಲಾಭದಾಯಕ ಬೆಲೆಯನ್ನು ಪಾವತಿ ಮಾಡುತ್ತಿವೆ.<br>ಎಥನಾಲ್ ಉತ್ಪಾದಿಸುವ ರಾಜ್ಯದ ಸಕ್ಕರೆ ಕಾರ್ಖಾನೆಗಳು ಕಬ್ಬು ಸರಬರಾಜು ಮಾಡಿದ ರೈತರಿಗೆ ಮೊದಲ ಕಂತಿನಲ್ಲಿ ಕೇಂದ್ರ ಸರ್ಕಾರವು 2022-23ನೇ ಸಾಲಿಗೆ ನಿಗದಿಪಡಿಸಿರುವ ನ್ಯಾಯಯುತ ಮತ್ತು ಲಾಭದಾಯಕ ಬೆಲೆಯ ಜೊತೆಗೆ ಪ್ರತಿ ಮೆ. ಟನ್ ಒಂದಕ್ಕೆ ರೂ.50/- ಗಳನ್ನು ಹೆಚ್ಚುವರಿಯಾಗಿ ಪಾವತಿಸಲು ದಿನಾಂಕ:05.12.2022 ರಂದು ಆದೇಶಿಸಲಾಗಿತ್ತು. ರಾಜ್ಯದ ಎಲ್ಲಾ ಕಾರ್ಖಾನೆಗಳು ಕೇಂದ್ರ ಸರ್ಕಾರವು ಘೋಷಿಸಿದ ನ್ಯಾಯಯುತ ಮತ್ತು ಲಾಭದಾಯಕ ದರದ ಮೇಲೆ ಪ್ರತಿ ಮೆ. ಟನ್ನಿಗೆ ರೂ.100/- ಅನ್ನು ಹೆಚ್ಚುವರಿಯಾಗಿ ನೀಡಲು ದಿನಾಂಕ: 29.12.2022 ರಂದು ಆದೇಶಿಸಲಾಗಿತ್ತು. |



le No. C I/50/SGF/2024-SUGAR2-C&I SEC (Computer No.
enerated from eOffice by C&I-Asstt(SHO), ASSISTANT, COMMERCE AND INDUSTRIES SECRETARIAT on 19/05/2025 01:08 PM

ಸದರಿ ಆದೇಶಗಳನ್ನು ಪ್ರಶ್ನಿಸಿ ದಕ್ಷಿಣ ಭಾರತ ಸಕ್ಕರೆ ಕಾರ್ಖಾನೆಗಳ ಒಕ್ಕೂಟ (ಸಿಸ್ಮಾ) ಮತ್ತು ಇತರರು ಮಾನ್ಯ ಉಚ್ಚ ನ್ಯಾಯಾಲಯ, ಬೆಂಗಳೂರು ಇಲ್ಲಿ ರಿಟ್ ಅರ್ಜಿಯನ್ನು ಸಲ್ಲಿಸಿ, ಈ ಎರಡೂ ಆದೇಶ/ಪತ್ರಗಳನ್ನು ವಜಾ ಮಾಡುವಂತೆ ಕೋರಿದ್ದರು. ಮಾನ್ಯ ನ್ಯಾಯಾಲಯವು ದಿನಾಂಕ:06.10.2023 ರಂದು ಆದೇಶ ನೀಡಿ, ರಾಜ್ಯ ಸರ್ಕಾರದ ವತಿಯಿಂದ ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ನಿರ್ದೇಶನವನ್ನು ನೀಡಿರುತ್ತದೆ. ಅದರಂತೆ ಕ್ರಮ ವಹಿಸಲಾಗುತ್ತಿದೆ.

**(ಆ)** ಕಳೆದ 4 ವರ್ಷಗಳಿಂದ ರಾಜ್ಯದ ಸಕ್ಕರೆ ಕಾರ್ಖಾನೆಗಳಿಂದ ಕಬ್ಬು ಬೆಳೆಗಾರರಿಗೆ ನೀಡಬೇಕಾಗಿರುವ ಬಾಕಿ ಹಣವೆಷ್ಟು;

ರಾಜ್ಯದ ಸಕ್ಕರೆ ಕಾರ್ಖಾನೆಗಳು ಕಳೆದ 4 ವರ್ಷಗಳಲ್ಲಿ ಕಬ್ಬು ಸರಬರಾಜು ಮಾಡಿದ ರೈತರಿಗೆ ಪಾವತಿಸಿರುವ ಕಬ್ಬು ಬಿಲ್ಲು ಪಾವತಿ ವಿವರಗಳು ಈ ಕೆಳಕಂಡಂತಿದೆ.

(ರೂ. ಕೋಟಿಗಳಲ್ಲಿ)

| ವರ್ಷ | ಪಾವತಿಸಬೇಕಾದಮೊತ್ತ | ಪಾವತಿಸಿದ ಮೊತ್ತ | ಬಾಕಿ ಮೊತ್ತ |
|---|---|---|---|
| 2019-2020 | 10428.96 | 10677.74 | ಇಲ್ಲ |
| 2020-2021 | 13402.22 | 13533.08 | ಇಲ್ಲ |
| 2021-2022 | 19634.84 | 19922.39 | ಇಲ್ಲ |
| 2022-2023 | 19747.85 | 20138.93 | ಇಲ್ಲ |
| 2023-24 (ದಿ: 31.01.2024 ರಲ್ಲಿದ್ದಂತೆ) | 15764.03 | 12026.21 | 3668.35 |

ಕಳೆದ ಹಂಗಾಮುಗಳಲ್ಲಿ ಕೆಲವು ಸಕ್ಕರೆ ಕಾರ್ಖಾನೆಗಳು ಎಫ್.ಆರ್.ಪಿ. ದರಕ್ಕೂ ಮೇಲ್ಪಟ್ಟು ಕಬ್ಬಿನ ಬಿಲ್ಲನ್ನು ಪಾವತಿಸಿರುತ್ತವೆ. 2023-24ನೇ ಸಾಲಿನಲ್ಲಿ ದಿನಾಂಕ:31.01.2024ರ ಅಂತ್ಯಕ್ಕೆ ರೂ.3668.35 ಕೋಟಿಗಳ ಕಬ್ಬು ಬಿಲ್ಲನ್ನು ಪಾವತಿಸುವುದು ಬಾಕಿ ಇರುತ್ತದೆ. ಬಾಕಿ ಪಾವತಿಸುವಂತೆ ಸೂಚಿಸಿ, ಸಕ್ಕರೆ ನಿರ್ದೇಶನಾಲಯದಿಂದ ದಿನಾಂಕ:17.01.2024 ರಂದು ಶಾಸನಬದ್ಧ ನೋಟಿಸ್‌ಗಳನ್ನು ನೀಡಲಾಗಿರುತ್ತದೆ. ಪ್ರಸ್ತುತ ಹಂಗಾಮು ಚಾಲ್ತಿಯಲ್ಲಿರುವುದರಿಂದ ಬಾಕಿ ಕಬ್ಬು ಬಿಲ್ಲು ಪಾವತಿಗೆ ಕಾಲಾವಕಾಶವಿರುತ್ತದೆ.

**(ಇ)** ಕಬ್ಬು ಬೆಳೆಗಾರರಿಗೆ ಸಕ್ಕರೆ ಕಾರ್ಖಾನೆಗಳಿಂದ ಎಷ್ಟು ವರ್ಷಗಳಿಂದ ಬಾಕಿ ಬರಬೇಕಾಗಿದೆ; ಸರ್ಕಾರ ಈ ಬಗ್ಗೆ ಕೈಗೊಂಡ ಕ್ರಮವೇನು;

2018-19ನೇ ಸಾಲಿನಲ್ಲಿ ಈ ಕೆಳಕಂಡ 3 ಸಕ್ಕರೆ ಕಾರ್ಖಾನೆಗಳು ರೈತರ ಕಬ್ಬು ಬಿಲ್ಲಿನ ಬಾಕಿ ಉಳಿಸಿಕೊಂಡಿರುತ್ತವೆ. ಇದನ್ನು ಹೊರತುಪಡಿಸಿ ಕಾರ್ಖಾನೆಗಳಿಂದ ರೈತರಿಗೆ ಪಾವತಿಸಬೇಕಾದ ಯಾವುದೇ ಹಳೆಯ ಬಾಕಿ ಇರುವುದಿಲ್ಲ.

(ರೂ.ಕೋಟಿಗಳಲ್ಲಿ)

| ವರ್ಷ | ಕಾರ್ಖಾನೆಯಹೆಸರು | ಬಾಕಿಯಿರುವ ಮೊತ್ತ |
|---|---|---|
| 2018-19 | 1. ಬೀದರ ಸಹಕಾರಿ ಸಕ್ಕರೆ ಕಾರ್ಖಾನೆ ನಿ., ಹಳ್ಳಿಖೇಡ್, ಹುಮನಾಬಾದ ತಾಲ್ಲೂಕು, ಬೀದರ್ ಜಿಲ್ಲೆ | 0.89 |
| | 2. ಭವಾನಿ ಶುಗರ್ಸ್ ಲಿ., ಬರೂರ, ಬೀದರ್ ಜಿಲ್ಲೆ | 1.80 |
| | 3. ಧ್ಯಾನಯೋಗಿ ಶ್ರೀಶಿವಕುಮಾರಸ್ವಾಮೀಜಿ ಶುಗರ್ಸ್ ಲಿ., ಇಂಡಿ, ವಿಜಯಪುರ ಜಿಲ್ಲೆ | 1.25 |
| | ಒಟ್ಟು | 3.94 |

2018-19ನೇ ಸಾಲಿನಲ್ಲಿ ಬಾಕಿ ಉಳಿಸಿಕೊಂಡಿರುವ ಮೂರು ಕಾರ್ಖಾನೆಗಳು ಕಳೆದ ನಾಲ್ಕು ಹಂಗಾಮುಗಳಿಂದ ಕಬ್ಬು ಅರೆಯುವ ಕಾರ್ಯವನ್ನು ಸ್ಥಗಿತಗೊಳಿಸಿರುವುದರಿಂದ ಕಾರ್ಖಾನೆಗಳಿಗೆ ಯಾವುದೇ ಆದಾಯದ ಮೂಲಗಳು ಇರುವುದಿಲ್ಲ. ಆದ್ದರಿಂದ ಕಬ್ಬು ಬಿಲ್ಲು ವಸೂಲು ಮಾಡುವಲ್ಲಿ ವಿಳಂಬವಾಗಿರುತ್ತದೆ. ಈ ಮೂರು ಕಾರ್ಖಾನೆಗಳ ವಿರುದ್ಧ ವಸೂಲಾತಿ ಪ್ರಮಾಣಪತ್ರವನ್ನು ಹೊರಡಿಸಿ ಕ್ರಮಕೈಗೊಳ್ಳಲು ಸಂಬಂಧಪಟ್ಟ ಜಿಲ್ಲೆಗಳ ಜಿಲ್ಲಾಧಿಕಾರಿಗಳಿಗೆ ಸೂಚಿಸಲಾಗಿದೆ. ಆದಾಗ್ಯೂ, ಕಬ್ಬು ಬಿಲ್ಲು ಪಾವತಿಸದೆ ಇರುವುದರಿಂದ ಈ ಮೂರು ಕಾರ್ಖಾನೆಗಳಿಗೆ ಸಂಬಂಧಪಟ್ಟ ಜಿಲ್ಲೆಗಳ



File No. C I/50/SGF/2024-SUGAR2-C&I SEC (Computer No. 1322311)

Generated from eOffice by SHOBHARANI H O, C&I-Asst1(SHO), ASSISTANT, COMMERCE AND INDUSTRIES SECRETARIAT on 19/05/2026 01:08 PM

| | | |
|---|---|---|
| | | ಜಿಲ್ಲಾಧಿಕಾರಿಗಳಿಗೆ ಪತ್ರ ಬರೆದು ಚರ ಮತ್ತು ಸ್ಥಿರಾಸ್ತಿಗಳನ್ನು ಹರಾಜು ಪ್ರಕ್ರಿಯೆಗೆ ಒಳಪಡಿಸಿ ಕಬ್ಬು ಬಿಲ್ಲು ವಸೂಲಾತಿಗೆ ಸೂಕ್ತಕ್ರಮಕೈಗೊಳ್ಳುವಂತೆ ಸೂಚಿಸಲಾಗಿದ್ದು, ವಸೂಲಾತಿ ಪ್ರಕ್ರಿಯೆ ಪ್ರಗತಿಯಲ್ಲಿರುತ್ತದೆ. |
| (ಈ) | ಸಕ್ಕರೆ ಕಾರ್ಖಾನೆಗಳಿಂದ ರೈತರಿಗೆ ಬಾಕಿ ಹಣ ಪಾವತಿಸಲು ವಿಳಂಬ ಮಾಡಿದಲ್ಲಿ ಅಥವಾ ವಿಫಲವಾದಲ್ಲಿ ಕೂಡಲೇ ಸರ್ಕಾರವು ರೈತರಿಗೆ ಬಾಕಿ ಹಣ ಪಾವತಿಸಲು ಕ್ರಮವಹಿಸುವುದೇ? | ಕಬ್ಬು (ನಿಯಂತ್ರಣ) ಆದೇಶ 1966ರ ಕಲಂ 3(3ಎ)ರ **ಹಾಗೂ ಕರ್ನಾಟಕ** ರಾಜ್ಯ ಕಬ್ಬು (ಖರೀದಿ ಮತ್ತು ಸರಬರಾಜು ನಿಯಂತ್ರಣ) **ಅಧಿನಿಯಮ** 2013 ಮತ್ತು ತಿದ್ದುಪಡಿ ಅಧಿನಿಯಮ 2014 ರನ್ವಯ ಕಾರ್ಖಾನೆಗಳು **ಕಬ್ಬು** ಸರಬರಾಜು ಮಾಡಿದ 14 ದಿವಸಗಳೊಳಗಾಗಿ ಕಬ್ಬು ಬಿಲ್ಲು **ಪಾವತಿಸದಿದ್ದಲ್ಲಿ** ನಂತರದ ಅವಧಿಗೆ ವಾರ್ಷಿಕ ಶೇಕಡ 15ರ ಬಡ್ಡಿಯೊಂದಿಗೆ ಪಾವತಿಸಬೇಕಿರುತ್ತದೆ.<br><br>ಕಬ್ಬು (ನಿಯಂತ್ರಣ) ಆದೇಶ-1966 ಕಲಂ-3(8) ರನ್ವಯ ಸಕ್ಕರೆ ಕಾರ್ಖಾನೆಗಳು ಕಬ್ಬು ಸರಬರಾಜು ಮಾಡಿದ ರೈತರಿಗೆ ನಿಗದಿತ ಅವಧಿಯಲ್ಲಿ ಕಬ್ಬು ಬಿಲ್ಲು ಪಾವತಿಸದೆ ಇದ್ದಲ್ಲಿ, ಕರ್ನಾಟಕ ಭೂಕಂದಾಯ ಕಾಯ್ದೆ 1964ರ ಅವಕಾಶಗಳ ರೀತ್ಯಾ ಬಾಕಿ ಉಳಿಸಿಕೊಂಡಿರುವ ಮೊತ್ತವನ್ನು ಭೂ ಕಂದಾಯ ಬಾಕಿ ಎಂದು ಪರಿಗಣಿಸಿ, ಶೇ.15ರ ಬಡ್ಡಿಯೊಂದಿಗೆ ವಸೂಲಿ ಮಾಡಲು ವಸೂಲಾತಿ ಪ್ರಮಾಣಪತ್ರವನ್ನು ಸಂಬಂಧಪಟ್ಟ ಜಿಲ್ಲಾಧಿಕಾರಿಗಳ ಮೂಲಕ ಜಾರಿಗೊಳಿಸಿ ಬಾಕಿ ವಸೂಲಾತಿಗೆ ಕ್ರಮ ಕೈಗೊಳ್ಳಲಾಗುವುದು.<br><br>2023-24ನೇ ಸಾಲಿನಲ್ಲಿ 76 ಸಕ್ಕರೆ ಕಾರ್ಖಾನೆಗಳು ಕಬ್ಬುಅರೆಯುವ ಕಾರ್ಯ ನಿರ್ವಹಿಸುತ್ತಿದ್ದು, ಕಾರ್ಖಾನೆಗಳು ದಿನಾಂಕ: 31.01.2024ರ ಅಂತ್ಯಕ್ಕೆ ಒಟ್ಟು 463.21ಲಕ್ಷ ಮೆ.ಟನ್ ಕಬ್ಬನ್ನು ನುರಿಸಿ 40.72ಲಕ್ಷ ಮೆ.ಟನ್ ಸಕ್ಕರೆಯನ್ನು ಉತ್ಪಾದಿಸಿದ್ದು, ಶೇಕಡವಾರು ಇಳುವರಿ 8.79% ಇರುತ್ತದೆ. ಕಬ್ಬು ಸರಬರಾಜು ಮಾಡಿದ ರೈತರಿಗೆ ದಿನಾಂಕ:31.01.2024ರ ಅಂತ್ಯಕ್ಕೆ ರೂ.15764.03ಕೋಟಿಗಳನ್ನು ಪಾವತಿಸಬೇಕಾಗಿದ್ದು, ಇದರಲ್ಲಿ ರೂ12026.21ಕೋಟಿಗಳನ್ನು ಪಾವತಿಸಲಾಗಿದ್ದು, ರೂ.3668.35ಕೋಟಿಗಳನ್ನು ಪಾವತಿಸುವುದು ಬಾಕಿ ಇರುತ್ತದೆ. ಬಾಕಿ ಪಾವತಿಸುವಂತೆ ಸೂಚಿಸಿ ಸಕ್ಕರೆ ನಿರ್ದೇಶನಾಲಯದಿಂದ ದಿನಾಂಕ: 17.01.2024 ರಂದು ಶಾಸನಬದ್ಧ ನೋಟಿಸ್ ನೀಡಲಾಗಿರುತ್ತದೆ. ಪ್ರಸ್ತುತ ಹಂಗಾಮು ಚಾಲ್ತಿಯಲ್ಲಿರುವುದರಿಂದ ಬಾಕಿ ಕಬ್ಬು ಬಿಲ್ಲು ಪಾವತಿಗೆ ಕಾಲಾವಕಾಶವಿರುತ್ತದೆ. |

ಸಂಖ್ಯೆ: ಸಿಐ 50 ಎಸ್‌ಜಿಎಫ್ 2024

(ಶಿವಾನಂದ ಎಸ್ ಪಾಟೀಲ್)
ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ
ಹಾಗೂ ಕೃಷಿ ಮಾರುಕಟ್ಟೆ ಸಚಿವರು



e No. C I/50/SGF/2024-SUGAR2-C&I SEC (Computer No.
nerated from eOffice by - C&I-Asstt(SHO), ASSISTANT COMMERCE AND INDUSTRIES SECRETARIAT on 19/05/2025 01:08 PM